ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಡಿಟಿಇ ಎಡಿಎಂಐ0 ಇಎಸ್‌ಟಿ 14 100 2022.

ಆಯುಕ್ತರ ಕಛೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ತಾಂತ್ರಿಕ ಶಿಕ್ಷಣ ಭವನ, ಅರಮನೆ ರಸ್ತೆ,
ಬೆಂಗಳೂರು-560001
ದಿನಾಂಕ: 11-01-2023

**ನೆನಪೋಲೆ**

## ಸುತ್ತೋಲೆ

ವಿಷಯ: ಅನುದಾನ ರಹಿತ ಸೇವೆಯನ್ನು ಪರಿಗಣಿಸುವ ಬಗ್ಗೆ.

ಉಲ್ಲೇಖ:
1. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ರವರ ಅ.ಸಪತ್ರಸಂಖ್ಯೆ: ಇಡಿ 171 ಎಸ್‌ಇಡಬ್ಲ್ಯೂ 2017 ದಿನಾಂಕ: 14.07.2022 ಮತ್ತು ಅ.ಸ. ಪತ್ರ ಸಂಖ್ಯೆ: ಇಡಿ/171/ಎಸ್‌ಇಡಬ್ಲ್ಯೂ/2017, ದಿ:14.12.2022
2. ಈ ಕಛೇರಿಯ ಸುತ್ತೋಲೆ ಸಂಖ್ಯೆ: ಡಿಟಿಇ/ಎಡಿಎಂಐ0/ಇಎಸ್‌ಟಿ(14)/100/2022, ದಿನಾಂಕ: 26-12-2022.

***********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (2)ರಲ್ಲಿ ಅನುದಾನಿತ ಪಾಲಿಟೆಕ್ನಿಕ್ ಸಿಬ್ಬಂದಿಗಳು ಅನುದಾನ ರಹಿತವಾಗಿ ಸಲ್ಲಿಸಿರುವ ಸೇವೆಯನ್ನು ಪರಿಗಣಿಸುವ ಬಗ್ಗೆ ಸೂಕ್ತ ಸ್ಪಷ್ಟ ಮಾಹಿತಿ ಕ್ರೋಢಿಕರಿಸಲು ಅನುವಾಗುವಂತೆ ನಮೂನೆ-01 ರಿಂದ 04 ರವರೆಗೆ ಮಾಹಿತಿಯನ್ನು ಸಲ್ಲಿಸುವಂತೆ ತಿಳಿಸಲಾಗಿತ್ತು. ಆದರೆ ನಮೂನೆ 01 ರಿಂದ 04 ರವರಗಿನ ನಮೂನೆಗಳಲ್ಲಿ ವೇತನ ಮತ್ತು ಭತ್ಯೆಗಳನ್ನು ನಿಖರವಾಗಿ ಲೆಕ್ಕಚಾರ ಮಾಡದೇ ಸೂಕ್ತ / ಸ್ಪಷ್ಟ ಮಾಹಿತಿ ಸಲ್ಲಿಸಿರುವುದಿಲ್ಲ.

ಆದ್ದರಿಂದ ಈ ಸುತ್ತೋಲೆಯೊಂದಿಗೆ ಲಗತ್ತಿಸಲಾದ 01 ರಿಂದ 04 ರವರೆಗಿನ ಮಾದರಿ ನಮೂನೆಗಳಂತೆ ಸಿಬ್ಬಂದಿವಾರು ಪ್ರತ್ಯೇಕ ಪ್ರತ್ಯೇಕವಾಗಿ ಅನುದಾನ ಪೂರ್ವದ ಸೇವೆಯನ್ನೊಳಗೊಂಡಂತೆ ಪಡೆಯಬೇಕಾಗಿರುವ ವೇತನ ಮತ್ತು ಭತ್ಯೆಗಳು, ಪಡೆಯಲಾಗಿರುವ ವೇತನ ಮತ್ತು ಭತ್ಯೆಗಳು ಹಾಗೂ ಪಡೆಯಬೇಕಾಗಿರುವ ಮತ್ತು ಪಡೆಯಲಾಗಿರುವ ವೇತನ ಮತ್ತು ಭತ್ಯೆಗಳ ವ್ಯತ್ಯಾಸ ಮೊತ್ತಗಳನ್ನು ಸೇವೆಗೆ ಸೇರಿದ ದಿನಾಂಕದಿಂದ ವಯೋನಿವೃತ್ತಿಹೊಂದುವ ದಿನಾಂಕದವರೆಗೆ ಅಥವಾ ದಿನಾಂಕ 31-12-2022ರವರೆಗೆ ಇವೆರಡರಲ್ಲಿ ಯಾವುದು ಮೊದಲು ಅಲ್ಲಿಯವರೆಗೆ ಲೆಕ್ಕಚಾರ ಮಾಡಿ ನಮೂನೆಗಳಲ್ಲಿ ಕಡ್ಡಾಯವಾಗಿ ಸಿಬ್ಬಂದಿಯ ಕ್ರೋಢೀಕೃತ ಮೊತ್ತವನ್ನು ನಮೂದಿಸಿ (ರಾಜ್ಯ ವೇತನ ಶ್ರೇಣಿ ಮತ್ತು ಎಐಸಿಟಿಇ ವೇತನ ಶ್ರೇಣಿ ಪಡೆಯುತ್ತಿರುವ ಬೋಧಕ / ಬೋಧಕೇತರ ಸಿಬ್ಬಂದಿಗಳ ಪ್ರತ್ಯೇಕ ಪಟ್ಟಿವಾರು) ಮೊತ್ತದ ವಿವರಗಳೊಂದಿಗೆ ಎಲ್ಲಾ ನಮೂನೆಗಳನ್ನು Microsoft Excel File Format ನಲ್ಲಿ ಭರ್ತಿ ಮಾಡಿ, soft copy ಯನ್ನು ಹಾಗೂ ಎಲ್ಲಾ ಮಾಹಿತಿಯನ್ನು pdf ನಲ್ಲಿ ಪ್ರಾಂಶುಪಾಲರ ಸಹಿ ಮತ್ತು ಮೊಹರಿನೊಂದಿಗೆ ಇ-ಮೇಲ್ ವಿಳಾಸಕ್ಕೆ **estdte14@gmail.com** ಗೆ ದಿನಾಂಕ: 12-01-2023ರ ಸಂಜೆ 5:00 ಗಂಟೆಯೊಳಗೆ ತಪ್ಪದೇ ಕಳುಹಿಸತಕ್ಕದ್ದು, ಇಲ್ಲವಾದಲ್ಲಿ ಮುಂದಿನ ಆಗುಹೋಗುಗಳಿಗೆ ಸಂಬಂಧಪಟ್ಟ ಸಂಸ್ಥೆಯ ಪ್ರಾಂಶುಪಾಲರುಗಳೇ ನೇರ ಹೊಣೆಗಾರರಾಗಿರುತ್ತಾರೆ ಎಂದು ಈ ಮೂಲಕ ತಿಳಿಸಲಾಗಿದೆ.

**"ಮಾನ್ಯ ನಿರ್ದೇಶಕರಿಂದ ಅನುಮೋದಿಸಲ್ಪಟ್ಟಿದೆ."**

**ಆಡಳಿತಾಧಿಕಾರಿ**
**ತಾಂತ್ರಿಕ ಶಿಕ್ಷಣ ಇಲಾಖೆ**

ಇವರಿಗೆ,
1. ಎಲ್ಲಾ ಅನುದಾನಿತ ಪಾಲಿಟೆಕ್ನಿಕ್ ಸಂಸ್ಥೆಗಳ ಪ್ರಾಂಶುಪಾಲರಿಗೆ-ಮುಂದಿನ ಕ್ರಮಕ್ಕಾಗಿ
2. ಸಂಯೋಜಕರು ಇ-ಆಡಳಿತ ವಿಭಾಗ, ಇಲಾಖಾ website ರಲ್ಲಿ ಪ್ರಕಟಿಸಲು.